(ಎ) ಸಾಗರ ತಾಲ್ಲೂಕಿನಲ್ಲಿ ಆರ್.ಇ.ಪಿ.ಯೋಜನೆಯಡಿಯಲ್ಲಿ ಹಣ ಬಿಡುಗಡೆ ಮಾಡದೇ ಇರುವುದು.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) :— ಮಾನ್ಯ ಅಧ್ಯಕ್ಷರೆ, ನಮ್ಮ ತಾಲ್ಲೂಕಿಗೆ 210 ಮಜರೆ ಗ್ರಾಮಗಳು, 18 ಹರಿಜನ ಬಸ್ತಿಗಳು, 10 ಜನತಾ ಕಾಲೋನಿಗಳಿಗೆ ವಿಶೇಷವಾಗಿ ವಿದ್ಯುಚ್ಛಕ್ತಿ ಕೊಡುವ ಆರ್.ಇ.ಪಿ. ಯೋಜನೆಯ ಅಡಿಯಲ್ಲಿ ಎರಡು ಕೋಟಿ ರೂಪಾಯಿಗಳ ಒಂದುಕಾರ್ಯಕ್ರಮ ಮಂಜೂರಾಗಿತ್ತು. ಇದನ್ನು 1995-96,1996-97ನೇ ಸಾಲಿನಲ್ಲಿ ಪೂರ್ಣಗೊಳಿಸಬೇಕಾಗಿತ್ತು. ಆದರೆ ಆ ಕೆಲಸವಾಗಿರಲಿಲ್ಲ. ಅವರಿಗೆ ಇದ್ದಂಥ ತೊಂದರೆಯಿಂದಾಗಿ ನಮಗೆ ಇದರಲ್ಲಿ ಸ್ವಲ್ಪ ನವೀಕರಣಗೊಳಿಸಬೇಕೆಂದು ಕೇಳಿದ ಮೇಲೆ ಅವರು ಅದನ್ನು ನವೀಕರಿಸಿಕೊಟ್ಟಿದ್ದಾರೆ. ಅದು 1998-99ರಲ್ಲಿ ಪೂರ್ಣಗೊಳಿಸಬೇಕಾಗಿತ್ತು. ಆದರೆ ಆದಾಗಿ 12 ತಿಂಗಳುಗಳಾದರೂ ಸಹ ಇವತ್ತಿನವರೆಗೆ ಟೆಂಡರ್ ನ್ನು ಪೂರ್ಣಗೊಳಿಸಿ ಕೆಲಸವನ್ನು ವಹಿಸಿಕೊಂಡಿದ್ದರೆ ಇದರ ಕಾರ್ಯಗತ ಮಾಡುವುದು ಯಾವಾಗ? ಹೀಗಾದರೆ ಹೇಗೆ? ಕೇಂದ್ರ ಸರ್ಕಾರದಿಂದ ಬಂದಂಥ ಹಣವನ್ನು ಸಹ ಉಪಯೋಗ ಮಾಡಿಕೊಳ್ಳಲಿಲ್ಲ, ನಮಗೆ ಆ ಸೌಲಭ್ಯವೂ ಸಿಗಲಿಲ್ಲ. ಇದರ ಬಗ್ಗೆ ಸರ್ಕಾರವೇನು ತೀರ್ಮಾನ ಮಾಡುತ್ತದೆ ಎಂದು ಕೇಳಬಯಸುತ್ತೇನೆ.

ಶ್ರೀ ಶರಣಬಸಪ್ಪ ದರ್ಶನಾಪುರ್ (ವಿದ್ಯುತ್ ರಾಜ್ಯ ಸಚಿವರು) :— ಮಾನ್ಯ ಅಧ್ಯಕ್ಷರೆ, ಇದು ತೀರ್ಥಹಳ್ಳಿ ಮತ್ತು ಸಾಗರದಲ್ಲಿರುವ ಗ್ರಾಮಗಳಿಗೆ ಮತ್ತು ಹೊಸನಗರದ ಕಡೆಗದ್ದೆ ಗ್ರಾಮಕ್ಕೆ ವಿಶೇಷವಾಗಿ ವಿದ್ಯುತ್ ಒದಗಿಸಲು ಈಗಾಗಲೇ ಟರ್ನ್ ಕೀ ಬೇಸಿಸ್ ಮೇಲೆ ಟೆಂಡರ್ ಕರೆದಿದ್ದೇವೆ, ಒಂದು ವಾರದಲ್ಲಿ ಅವರಿಗೆ ವರ್ಕ್ ಆರ್ಡರ್ ಕೊಡತಕ್ಕ ವ್ಯವಸ್ಥೆ ಮಾಡಿಕೊಡುತ್ತೇವೆ. ಮೆಟೀರಿಯಲ್ಸ್‌ಗಳನ್ನು ಅವರೆ ತಂದು ಅವರೆ ಕೆಲಸ ಮಾಡಬೇಕು. ಮುಂದೆ ಅವರು ಕೆಲಸ ಮಾಡಿಕೊಂಡು ಹೋಗುತ್ತಾರೆ.

ಅಧ್ಯಕ್ಷರು :— ಹೊಸನಗರ ತಾಲ್ಲೂಕಿನ ಕಡೆಗದ್ದೆಯನ್ನೂ ಸೇರಿಸಿ.

(ಏ) ಯಾದಗಿರಿ ಮತ್ತು ಸೇಡಂ ತಾಲ್ಲೂಕಿನಲ್ಲಿ ಪಂಪುಸೆಟ್ಟುಗಳಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಳಿಸುವುದು.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಅಧ್ಯಕ್ಷರೆ, ನಮ್ಮ ಯಾದಗಿರಿ ಮತ್ತು ಸೇಡಂ ತಾಲ್ಲೂಕಿನಲ್ಲಿ ಐದುನೂರು, ಆರು ನೂರುಪಂಪುಸೆಟ್ಟುಗಳಿಗೆ ಸೂಪರಿಂಡೆಂಟಿಂಡ್ ಇಂಜಿನಿಯರ್ ರವರ ಆದೇಶದ ಮೇರೆಗೆ ವಿದ್ಯುತ್ ಸಂಪರ್ಕವನ್ನು ಕಡಿದುಹಾಕಿದ್ದಾರೆ. ಆ ರೈತರು ಈಗಾಗಲೇ ಬೆಳೆಯನ್ನು ಹಾಕಿಕೊಂಡಿದ್ದಾರೆ. ಆ ರೈತರುಗಳು ಏನು ಅಕ್ರಮ ಸಂಪರ್ಕವನ್ನು ಸಕ್ರಮಗೊಳಿಸುವ ಕಾರ್ಯಕ್ರಮವಿದೆ, ಅದನ್ನು ಜೂನ್‌ನಲ್ಲಿ ಹಣ